## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| **ಎಸ್ ಸಿ :** | 231/2022 |

| | | |
|---|---|---|
| ಸಾಕ್ಷಿದಾರರ ಹೆಸರು | ಮಹದೇವ | |
| ಗಂಡನ ಹೆಸರು | ಬಣ್ಣಾರಿ | ಸಾಕ್ಷಿಗೆ ದಿಃ 13.02.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 39 ವರ್ಷ | |
| ಉದ್ಯೋಗ | ಪೌರ ಕಾರ್ಮಿಕರು | ಪಿ.ಡಬ್ಲ್ಯೂ-10 |
| ವಾಸ ಸ್ಥಳ | ಸಾತಗಳ್ಳಿ, ಮೈಸೂರು | ಸಿ.ಡಬ್ಲ್ಯೂ-27 |

## ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು 15 ವರ್ಷದಿಂದ ಮಹಾನಗರ ಪಾಲಿಕೆಯಲ್ಲಿ ಹಂಗಾಮಿ ಪೌರ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೈಸೂರು ಹೆಬ್ಬಾಳ ಏರಿಯಾದಲ್ಲಿ, ಟಾಟಾ ಎ.ಸಿ ಗೂಡ್ಸ್ ವಾಹನದಲ್ಲಿ ಕಸ ಸಂಗ್ರಹಣೆ ಮಾಡಿ ರಿಂಗ್ ರೋಡಿನ ಹೈ ಟೆನ್‌ಷನ್ ಲೈನ್ ಹತ್ತಿರ ಮಹಾನಗರ ಪಾಲಿಕೆಯ ದೊಡ್ಡ ವಾಹನದಲ್ಲಿ ಹಾಕುತ್ತೇವೆ. ನಾನು ಆರೋಪಿತರನ್ನು ನೋಡಿರುವುದಿಲ್ಲ. ಹೆಬಾಳ ಪೊಲೀಸ ಠಾಣೆ ಮೈಸೂರು ಇವರು ಸುಮಾರ ಒಂದುವರೆ ವರ್ಷದ ಹಿಂದೆ ಪೊಲೀಸರು ನನಗೆ ವಿಚಾರಣೆ ಮಾಡಿ ಅಜ್ಜಿಯನ್ನು ಸಾಯಿಸಿ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ನಿಮ್ಮ ಆಟೋದಲ್ಲಿ ತಂದು ಹಾಕಿದ್ದಾರಾ ಎಂದು ಕೇಳಿದರು ಅದಕ್ಕೆ ನಾನು ನನಗೆ ಗೊತ್ತಿಲ್ಲ ಸುಮಾರು ಜನ ಕಸ ಹಾಕುತ್ತಾರೆ ಎಂದು ಹೇಳಿರುತ್ತೇನೆ. ಪೊಲೀಸರು ಹೆಬ್ಬಾಳ 2 ನೇ ಹಂತದ ಸುಮುಖಶಾಲೆ ಕಡೆಯ ಜಂಕ್ಷನ್ ಹತಿರ ಹೈ ಟೆನಷನ್ ವಿದ್ಯುತ್ ಲೈನ್ ಕೆಳಗೆ ಪಂಚನಾಮೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಮಹಜರ್ ಅನ್ನು ನಿಪಿ-20 ಎಂದು ಹಾಗೂ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-20(ಎ) ಎಂದು ಗುರುತಿಸಲಾಯಿತು. ಛಾಯಚಿತ್ರಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಪಿ.21 ಮತ್ತು 22 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ

ವಿಷಯ ನನಗೆ ಗೊತ್ತಿಲ್ಲ. ಆರೋಪಿತರು ಆಟೋದಲ್ಲಿ ತಂದು ಕಸ ಹಾಕಿದ್ದಾರೆ ಎಂದು ನಾನು ಹೇಳಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ 09.10.2021 ರಂದು ನಾನು ಠಾಣೆಗೆ ಹೋಗಿದ್ದಾಗ ಪೊಲೀಸರು 1 ಮತ್ತು 2 ಮತ್ತು 4 ನೇ ಆರೋಪಿಗಳ ಭಾವಚಿತ್ರಗಳನ್ನು ತೋರಿಸಿ ದಿಃ 03.10.2021 ರಂದು ಬೆಳಗ್ಗೆ 7.15 ಗಂಟೆ ಸಮಯದಲ್ಲಿ 2 ನೇ ಆರೋಪಿ ನನ್ನ ವಾಹನಕ್ಕೆ ಕಸ ಹಾಕಿದ್ದರೂ ಎಂದು ನಾನು ಆಕೆಯನ್ನು ಗುರುತಿಸಿ ಹೇಳಿಕೆ ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಹೇಳಿಕೆಯ ಸಂಬಂಧಪಟ್ಟ ಭಾಗವನ್ನು ನಿಪಿ-23 ಎಂದು ಗುರುತಿಸಲಾಯಿತು. ನಿಪಿ.20 ರಂತೆ ಪೊಲೀಸರು ಮಹಜರು ಮಾಡಿ ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿ ಇದೆ. ಕಸವನ್ನು ತೆಗೆದುಕೊಂಡು ಹೋಗಿ ಕಾಂಪಕ್ಟರ್ ಕಂಟೈನರ್ ಲಾರಿಗೆ ಕಸ ಹಾಕಿದ ಸ್ಥಳ ಎಂದು ನಾನು ತೋರಿಸಿದ ಮೇರೆಗೆ ನಿಪಿ.20 ರಂತೆ ಮಹಜರು ಬರೆದಿದ್ದಾರೆ ಎಂದು ಸೂಚಿಸುವುದು ಸರಿ ಇದೆ. 2 ನೇ ಆರೋಪಿಯನ್ನು ಗುರುತಿಸಿ ಹೇಳಿಕೆ ಕೊಟ್ಟರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು :- ಆರೋಪಿತರ ಪರ ವಕೀಲರಾದ ಎನ್.ಎನ್. ಆರ್ ರವರಿಂದಃ-**

ಕಸ ತೆಗೆಯುವ ಕೆಲಸಕ್ಕೆ ಮೇಸ್ತ್ರಿ ನಮ್ಮನ್ನು ನೇಮಕ ಮಾಡಿರುತ್ತಾರೆ. ಪೊಲೀಸರು ನನಗೆ ಪರಿಚಯಸ್ಥರು ಎಂದರೆ ಸರಿ ಇದೆ. ದಿಃ 09.10.2021 ರಂದು ಮಧ್ಯಾಹ್ನ 12 ರಿಂದ 12.45 ಗಂಟೆವರೆಗೆ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ಪೊಲೀಸರು ನನಗೆ ನೋಟೀಸ್ ಕೊಟ್ಟಿದ್ದರು. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಎಂದರೆ

ಸರಿಯಲ್ಲ. ನನಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು